




# ಸಿನಿಮಾ ಓದಿ!

ಬೋರಾಗಿದೆ ಒಂದು ಫಿಲಂ ನೋಡೋಣ್ವಾ?'– ಹೀಗೆ ನಾವೆಲ್ಲರೂ ಪದೇ ಪದೇ ಕೇಳಿಯೇ ಕೇಳಿರುತ್ತೇವೆ. ಅದರಲ್ಲಿಯೂ ಕಳೆದೊಂದು ವರ್ಷದಲ್ಲಿ ಮನೆಯೊಳಗೇ ಕೂತಿರುವ ನಮಗೆ ಸಿನಿಮಾ ಬೋರು ಕಳೆಯುವ ಮನರಂಜನೆಯ ವಿಷಯವಾಗಿ ಕಂಡಿರುವುದರಲ್ಲಿ ಅಚ್ಚರಿಯೇನೂ ಇಲ್ಲ.

ಆದರೆ ಆ ಕ್ಷಣದ ಬೇಸರವನ್ನು ಕಳೆಯುವುದಷ್ಟೇ ಸಿನಿಮಾದ ಕೆಲಸವೇ? ಬೇಸರವನ್ನು ಕಳೆಯುವ ಈ ಹವ್ಯಾಸವೇ ನಮ್ಮ ವ್ಯಕ್ತಿತ್ವವನ್ನು ವಿಸ್ತರಿಸುವ, ಚಿಂತನೆಯನ್ನು ರೂಪಿಸುವ, ಹೊಸ ಹೊಳಹುಗಳನ್ನು ಪಡೆದುಕೊಳ್ಳುವ ದಾರಿಯೂ ಆಗಬಹುದೇ? ಈ ಪ್ರಶ್ನೆಯನ್ನು ಸದ್ಯದ ಸಂದರ್ಭದಲ್ಲಿಯಂತೂ ನಾವು ಕೇಳಿಕೊಳ್ಳಲೇಬೇಕು.

ಹಾ, ಚಿಂತನೆ, ವ್ಯಕ್ತಿತ್ವ ಎಂದೆಲ್ಲ ಹೇಳುತ್ತಿರುವುದನ್ನು ನೋಡಿ ಕಮರ್ಷಿಯಲ್ ಸಿನಿಮಾ ನೋಡಬೇಡಿ, 'ಆರ್ಟ್ ಸಿನಿಮಾ'ಗಳನ್ನು ನೋಡಿ, ಆಗ ನೀವು ಬುದ್ಧಿವಂತರಾಗುತ್ತೀರಿ ಎಂದು ಹೇಳಲು ಹೊರಟಿದ್ದೇನೆ ಅಂದುಕೊಳ್ಳಬೇಡಿ. ಖಂಡಿತ ಇಲ್ಲ. ನೀವು ಯಾವ ರೀತಿಯ ಸಿನಿಮಾಗಳನ್ನಾದರೂ ನೋಡಿ... ಆದರೆ ನೋಡುವ ಕ್ರಮದಲ್ಲಿ ತುಸುವೇ ಬದಲಾವಣೆ ಮಾಡಿಕೊಳ್ಳಿ. ಆಗ ಆ ನೋಡುವಿಕೆ, ಓದುವಿಕೆಯೂ ಆಗಿ ಬದಲಾಗುತ್ತದೆ. ನೀವು ನೋಡಿದ ಅದೇ ಸಿನಿಮಾಗಳು ಹೊಸ ಹೊಸ ರೀತಿಯಲ್ಲಿ ನಿಮ್ಮ ಮನಸೊಳಗೆ ಇಳಿಯಲಾರಂಭಿಸುತ್ತವೆ. ಇದುವರೆಗೆ ಬೇಸರ ಕಳೆಯುವ ಉದ್ದೇಶವನ್ನಷ್ಟೇ ಪೂರೈಸುತ್ತಿದ್ದ ಸಿನಿಮಾಗಳು ಈಗ ನಿಮ್ಮ ಚಿಂತನೆಯ ಕ್ರಮವನ್ನು ದಟ್ಟಗೊಳಿಸುವ, ಗಟ್ಟಿಗೊಳಿಸುವ ಕೆಲಸವನ್ನೂ ಮಾಡಲು ಶುರುಮಾಡುತ್ತವೆ?

ಹಾಗಾದರೆ ನೋಡುವ ಕ್ರಮವನ್ನು ಬದಲಿಸಿಕೊಳ್ಳುವುದು ಹೇಗೆ? ನೀವು ನೋಡುವ ಸಿನಿಮಾಗಳ ನಡುವೆ ಒಂದು ಅಂತರ್‌ಸಂಬಂಧ ಇರುವಂತೆ ಮಾಡುವುದು ಸಾಧ್ಯವೇ ಯೋಚಿಸಿ.

ನಾವು ಬಹಳ ಸಲ ನಮ್ಮ ನೆಚ್ಚಿನ ಜಾನರ್‌ಗಳ, ಹೀರೊಗಳ ಸಿನಿಮಾಗಳನ್ನು ಆಯ್ದುಕೊಂಡು ನೋಡುತ್ತಿರುತ್ತೇವೆ. ರಾಜ್‌ಕುಮಾರ್ ಅವರಂಥ ಮೇರುನಟರ ಸಿನಿಮಾಗಳನ್ನು ನೋಡುವಾಗ ಈ ಸೂತ್ರವೂ ಉಪಯೋಗಕ್ಕೆ ಬರಬಹುದು. ಉದಾ: ರಾಜ್ ಅವರ ಅತ್ಯುತ್ತಮ ಹತ್ತು ಸಿನಿಮಾಗಳನ್ನು ಈ ವಾರ ನೋಡುತ್ತೇನೆ ಅಂದುಕೊಳ್ಳಿ. ಅತ್ಯುತ್ತಮ ಅನ್ನುವುದನ್ನು ಹೇಗೆ ನಿರ್ಧರಿಸುವುದು ಎಂಬ ಗೊಂದಲ ಬೇಡ. ಅದಕ್ಕೆ ನೀವೇ ನಿರ್ಣಾಯಕರು. ಬಂಗಾರದ ಮನುಷ್ಯ, ಕಸ್ತೂರಿ ನಿವಾಸ, ಮಯೂರ, ಬಬ್ರುವಾಹನ, ಹಾಲು ಜೇನು, ಕವಿರತ್ನ ಕಾಳಿದಾಸ, ಸಂಪತ್ತಿಗೆ ಸವಾಲ್, ಎರಡು ಕನಸು, ಚಲಿಸುವ ಮೋಡಗಳು, ಜೀವನಚೈತ್ರ... ಹೀಗೆ ಪಟ್ಟಿ ಬೆಳೆಸುತ್ತಲೇ ಹೋಗಬಹುದು. ಈ ಸಿನಿಮಾ ಪಟ್ಟಿ ಕಾಲಾನುಕ್ರಮದಲ್ಲಿವೆ. ಇವುಗಳನ್ನು ದಿನಕ್ಕೊಂದರಂತೆ ಹೀಗೆಯೇ ನೋಡಿ. ಆಗ ರಾಜ್‌ಕುಮಾರ್ ಆಯ್ದುಕೊಂಡು ನಟಿಸುತ್ತಿದ್ದ ಸಿನಿಮಾಗಳಿಗೆ ಸಂಬಂಧಿಸಿದಂತೆ ಒಂದು ಸೂತ್ರ ತಂತಾನೆಯೇ ನಿಮ್ಮ ಮನಸಲ್ಲಿ ಮೂಡುತ್ತದೆ. ಅವರ ನಟನೆ, ವಸ್ತು, ಆಯ್ಕೆಗೆ ಸಂಬಂಧಿಸಿದಂತೆ ಹಲವು ಹೊಳಹುಗಳು ದೊರೆಯುತ್ತ ಹೋಗುತ್ತವೆ.




ರಾಜ್ ವಿಷಯದಲ್ಲಿ ಕಾಣಿಸುವ ಈ ಸೂತ್ರ ಬೇರೆ ಎಲ್ಲ ನಟರ ಸಿನಿಮಾದಲ್ಲಿಯೂ ಕಾಣಿಸುತ್ತದೆ ಎನ್ನಲಾಗದು. ಹಾಗಾಗಿ ಸಿನಿಮಾ ಆಯ್ದುಕೊಳ್ಳುವಾಗ ನಟರಿಗಿಂತ ನಿರ್ದೇಶಕರ ಹೆಸರನ್ನು ನೋಡುವುದು ಹೆಚ್ಚು ಉಪಯೋಗಕ್ಕೆ ಬರಬಹುದು. ಕನ್ನಡದ ಪ್ರತಿಭಾವಂತ ನಿರ್ದೇಶಕರಲ್ಲಿ ಎನ್. ಲಕ್ಷ್ಮೀನಾರಾಯಣ ಕೂಡ ಒಬ್ಬರು. ಅವರು ನಿರ್ದೇಶಿಸಿದ್ದು ಬೆರಳೆಣಿಕೆ ಸಿನಿಮಾಗಳು. ನಾಂದಿ, ಉಯ್ಯಾಲೆ, ಮುಕ್ತಿ, ಅಬಚೂರಿನ ಪೋಸ್ಟಾಫೀಸು, ಮುಯ್ಯಿ, ಬೆಟ್ಟದ ಹೂವು... ಇಲ್ಲಿನ ಬಹುತೇಕ ಸಿನಿಮಾಗಳು ಯೂಟ್ಯೂಬ್‌ನಲ್ಲಿ ಉಚಿತವೀಕ್ಷಣೆಗೆ ಸಿಗುತ್ತವೆ. ಈ ಎಲ್ಲ ಸಿನಿಮಾಗಳನ್ನು ನೋಡಿದಿರಾದರೆ, ಅದು ಲಕ್ಷ್ಮೀನಾರಾಯಣ ಸಿನಿಮಾಗಳ ವಾರ! ಒಬ್ಬನೇ ನಿರ್ದೇಶಕ ಬೇರೆ ಬೇರೆ ವಸ್ತುಗಳನ್ನು ಹೇಗೆ ನಿರ್ವಹಿಸಿದ್ದಾನೆ, ಅವುಗಳಲ್ಲಿ ಯಾವುದು ಯಶಸ್ವಿಯಾಗಿದೆ? ಯಾವುದು ವಿಫಲವಾಗಿದೆ? ಎಂಬುದೆಲ್ಲವನ್ನೂ ಸೂಕ್ಷ್ಮವಾಗಿ ಯೋಚಿಸುತ್ತ ಹೋಗಿ. ಸಾಧ್ಯವಾದರೆ ಟಿಪ್ಪಣಿಯೂ ಮಾಡಿಕೊಳ್ಳಿ. ಒಂದು ವಾರ ಮುಗಿಯುವಷ್ಟರಲ್ಲಿ ಲಕ್ಷ್ಮೀನಾರಾಯಣ ಅವರ ಸಿನಿಮಾದ ಸಮಗ್ರ ದೃಷ್ಟಿ ನಿಮ್ಮ ಮನಸೊಳಗೆ ಇಳಿದಿರುತ್ತವೆ.

ಹೀಗೆಯೇ, ಪುಟ್ಟಣ್ಣ ಕಣಗಾಲ್ ಅವರ ಸಿನಿಮಾಗಳು, ಗಿರೀಶ ಕಾಸರವಳ್ಳಿ ಅವರ ಸಿನಿಮಾಗಳು, ಹೊಸ ತಲೆಮಾರಿನ ನಿರ್ದೇಶಕರ ಸಿನಿಮಾಗಳನ್ನೂ ನೋಡಬಹುದು. ಬೇರೆ ಭಾಷೆಯ ಸಿನಿಮಾಗಳನ್ನು ನೋಡುವ ಹವ್ಯಾಸವಿದ್ದರೂ ಈ ಸೂತ್ರವನ್ನು ಬಳಸಿಕೊಳ್ಳಬಹುದು. ಬರೀ ನಟ, ನಿರ್ದೇಶಕನ್ನಿಟ್ಟುಕೊಂಡಷ್ಟೇ ಅಲ್ಲ, ನಿಮ್ಮ ನೋಡುವಿಕೆಯ ಜಾಯಮಾನಕ್ಕೆ ತಕ್ಕ ಹಾಗೆ ಇಂಥ ಹಲವು ಸೂತ್ರಗಳನ್ನು ನೀವೇ ರೂಪಿಸಿಕೊಳ್ಳಬಹುದು. ಮಲಯಾಳಂ ಭಾಷೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಬಂದ ಹತ್ತು ಸಿನಿಮಾಗಳನ್ನು ನೋಡುತ್ತೇನೆ ಎಂದರೆ ಅದೂ ಆ ಭಾಷೆಯನ್ನು, ಅಲ್ಲಿನ ಸಂಸ್ಕೃತಿಯನ್ನು, ಸಿನಿಮಾ ಮಾಡುವ ವಿಧಾನವನ್ನು ಅರಿತುಕೊಳ್ಳಲು ಸಹಾಯಕವೇ. ಇಂಥ ಸೂತ್ರಗಳನ್ನು ನೀವೇ ರೂಪಿಸಿಕೊಳ್ಳಿ. ಅದಕ್ಕೆ ಹೊಂದುವ ಕ್ರಮದಲ್ಲಿ ಸಿನಿಮಾ ನೋಡಿ. ಆಗ ನಿಮ್ಮ ಬೇಸರ ಕಳೆಯುವ ಹವ್ಯಾಸವೇ ವ್ಯಕ್ತಿತ್ವ ರೂಪಿಸುವ ಸಂಗತಿಯೂ ಆಗುತ್ತದೆ.

**ಈ ಮೂರು ಸಿನಿಮಾಗಳನ್ನು ನೋಡಲು ಕೊಂಡಿ:**
**https://bit.ly/3tXGzKl**
**https://bit.ly/341dJ0R**
**https://bit.ly/3weRFvK**

■ **ಆಯೇಷಾ**